VIJAYA KARNATAKA 31 December 2021

# ಓದಿನ ಅಭಿರುಚಿ ಬೆಳೆಸಿದ ಡಿಎಸ್‌ಎನ್‌ಗೆ ಪ್ರಶಸ್ತಿ

■ **ವಿಕ ಬ್ಯೂರೊ** ಬೆಂಗಳೂರು

ಹಿರಿಯ ಲೇಖಕ ಮತ್ತು 'ಹೊಸ ಮನುಷ್ಯ' ನಿಯತಕಾಲಿಕ ಸಂಪಾದಕ ಡಿ.ಎಸ್ ನಾಗಭೂಷಣ ಅವರ 'ಗಾಂಧಿ ಕಥನ' ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರವಾಗಿದೆ. ಪ್ರಶಸ್ತಿಯು ಒಂದು ಲಕ್ಷ ರೂ. ನಗದು ಮತ್ತು ಫಲಕವನ್ನು ಒಳಗೊಂಡಿದೆ. ಬೋಳುವಾರ್ ಮೊಹಮ್ಮದ್ ಕುಂಞ್, ಅಮರೇಶ ನುಗಡೋಣಿ ಹಾಗೂ ಸಬಿಹಾ ಭೂಮಿಗೌಡ ಅವರನ್ನೊಳಗೊಂಡ ತೀರ್ಪುಗಾರರ ಸಮಿತಿ ಗಾಂಧಿ ಕಥನವನ್ನು ಆಯ್ಕೆ ಮಾಡಿದೆ. ಇದಲ್ಲದೆ ಬಾಲ ಪುರಸ್ಕಾರ ವಿಭಾಗದಲ್ಲಿ ಬಸು ಬೇವಿನಗಿಡದ ಅವರ 'ಓಡಿ ಹೋದ ಹುಡುಗ' ಮಕ್ಕಳ ಕಾದಂಬರಿ ಹಾಗೂ 'ಯುವ ಪುರಸ್ಕಾರ'ಕ್ಕೆ ಎಚ್.ಲಕ್ಷ್ಮೀನಾರಾಯಣ ಸ್ವಾಮಿ ಅವರ 'ತೊಗಲ ಚೀಲದ ಕರ್ಣ 'ಮಹಾ ಕಾವ್ಯ ಆಯ್ಕೆಯಾಗಿದೆ. ಯುವ ಹಾಗೂ ಬಾಲ ಪುರಸ್ಕಾರಗಳು 50 ಸಾವಿರ ರೂ. ನಗದು ಬಹುಮಾನವನ್ನು ಒಳಗೊಂಡಿದೆ.

ಗಾಂಧಿ ಕಥನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ

ಪ್ರಶಸ್ತಿ ವಿಜೇತರನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಚಂದ್ರಶೇಖರ ಕಂಬಾರ ಅವರು ಅಭಿನಂದಿಸಿದ್ದಾರೆ. ಪ್ರಶಸ್ತಿಗಳನ್ನು ಫೆಬ್ರವರಿ ತಿಂಗಳಲ್ಲಿ ದಿಲ್ಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.


ಡಿ.ಎಸ್.ನಾಗಭೂಷಣ ಅವರು 1952 ಫೆಬ್ರವರಿ 1 ರಂದು ಬೆಂಗಳೂರಿನ ತಿಮ್ಮಸಂದ್ರದಲ್ಲಿ ಜನಿಸಿದರು. ಗಣಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಅವರು ದಿಲ್ಲಿ ಸೇರಿದಂತೆ ಆಕಾಶವಾಣಿಯ ವಿವಿಧ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿದ್ದರು. ಕನ್ನಡದಲ್ಲಿ ವಿಶಿಷ್ಟ ಸಾಹಿತ್ಯಿಕ ಕಾರ್ಯಕ್ರಮಗಳ ರೂಪಣೆ ಮತ್ತು ಸಂಯೋಜನೆಯಲ್ಲಿ ಅವರು ಮಾದರಿ ಎಂದೆನಿಸಿದ್ದರು. ಸಾಹಿತ್ಯ ವಿಮರ್ಶೆ, ಸಮಕಾಲೀನ ವಿದ್ಯಮಾನಗಳ ಕುರಿತು ಅವರು ಹತ್ತಾರು ಕೃತಿಗಳನ್ನು ಬರೆದಿದ್ದಾರೆ. ಅವರ ಪತ್ನಿ ಸವಿತಾ ನಾಗಭೂಷಣ ಅವರು ಕನ್ನಡದ ಪ್ರಮುಖ ಕವಯತ್ರಿಯಾಗಿದ್ದಾರೆ.

ಯು.ಆರ್. ಅನಂತಮೂರ್ತಿ ಅವರ ಮಿತ್ರರಾಗಿದ್ದ ಹಿಂದಿಯ ಪ್ರಸಿದ್ಧ ಕಾದಂಬರಿಕಾರ, ಜ್ಞಾನಪೀಠ ಪುರಸ್ಕೃತರಾಗಿದ್ದ ನಿರ್ಮಲ್ ವರ್ಮಾ ಅವರೊಂದಿಗೆ ಒಡನಾಟಹೊಂದಿದ್ದ ನಾಗಭೂಷಣ್ ಅವರ ಜೀವನ ಕಥನ ಕೂಡ ಬಲ್ಲವರ ಪಾಲಿಗೆ ದೊಡ್ಡ ಸ್ಫೂರ್ತಿ ಮತ್ತು ಚೈತನ್ಯವಾಗಿದೆ. ನೈಜ ಕನ್ನಡ ಪ್ರೇಮಿಯಾಗಿರುವ ಡಿಎಸ್ಎನ್, 2017ರಲ್ಲಿ ತಮ್ಮನ್ನು ಅರಸಿಕೊಂಡು ಬಂದಿದ್ದ ರಾಜ್ಯೋತ್ಸವ ಪ್ರಶಸ್ತಿಯನ್ನು ನಯವಾಗಿ ನಿರಾಕರಿಸಿದ್ದರು. ನಮ್ಮ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ನಡೆಗಳ ಬಗ್ಗೆ ಆಳವಾಗಿ ಚಿಂತಿಸುವ ಅವರ ಬರಹಗಳು ವಿಕ ಸಂಪಾದಕೀಯ ಪುಟದಲ್ಲಿ ಪ್ರಕಟಗೊಂಡಿವೆ ಎಂಬುದು ಗಮನಾರ್ಹ. ಅವರು ಸಂಪಾದಿಸುತ್ತಿರುವ 'ಹೊಸ ಮನುಷ್ಯ' ಸಮಾಜವಾದದ ಹಿನ್ನೆಲೆಯಲ್ಲಿ ಸಮಕಾಲೀನ ಭಾರತದ ವಿದ್ಯಮಾನಗಳ ಆಳವಾದ ವಿಶ್ಲೇಷಣೆಯನ್ನು ಒಳಗೊಂಡಿದೆ.




■ ಬಸು ಬೇವಿನಗಿಡದ ಅವರ ಅವರ ' ಓಡಿ ಹೋದ ಹುಡುಗ' ಕೃತಿಗೆ ಬಾಲ ಪುರಸ್ಕಾರ

■ ಲಕ್ಷ್ಮೀನಾರಾಯಣ ಸ್ವಾಮಿ ಅವರ 'ತೊಗಲ ಚೀಲದ ಕರ್ಣ'ಕ್ಕೆ ಯುವ ಪುರಸ್ಕಾರ



ಈ ಪ್ರಶಸ್ತಿ ನನಗೆ ಸಹಜವಾಗಿಯೇ ಖುಷಿ ತಂದಿದೆ. ನನ್ನಂಥವರಿಗೆ ಪ್ರಶಸ್ತಿ ಕೊಡುವ ಕಾಲ ಇನ್ನೂ ಇದೆ ಎಂಬ ಕಾರಣಕ್ಕೆ ನನಗೆ ಅಚ್ಚರಿಯೂ ಆಗಿದೆ.

**-ಡಿ.ಎಸ್.ನಾಗಭೂಷಣ್** ಪ್ರಶಸ್ತಿ ಪುರಸ್ಕೃತರು



ಈ ಪ್ರಶಸ್ತಿ ಬರಲಿದೆ ಎಂಬ ನಿರೀಕ್ಷೆ ಇರಲಿಲ್ಲ, ನನಗೆ ತುಂಬ ಸಂತೋಷವಾಯಿತು. ಮಕ್ಕಳಲ್ಲಿ ಸಾಹಿತ್ಯ ಸೂಕ್ಷ್ಮತೆಯನ್ನು ಬೆಳೆಸುವ ಪ್ರಯತ್ನ ನನ್ನದು.

**- ಬಸು ಬೇವಿನಗಿಡದ** ಪ್ರಶಸ್ತಿ ಪುರಸ್ಕೃತ ಸಾಹಿತಿ.

## ಗಾಂಧಿ ಕಥನ

**ಸಮಾಜವಾದಿ ಪರಿಪ್ರೇಕ್ಷ್ಯದಿಂದ ಗಾಂಧಿ ಅವರ ಜೀವನ, ಹೋರಾಟ, ಚಿಂತನೆಯನ್ನು ಅವಲೋಕಿಸುವ ಕೃತಿ ಇದು. 2019ರಲ್ಲಿ ಪ್ರಕಟವಾದ ಈ ಕೃತಿ 22 ಮರುಮುದ್ರಣವನ್ನು ಕಂಡಿದೆ. ಇತ್ತೀಚಿನ ವರ್ಷಗಳಲ್ಲಿ ಇಷ್ಟೊಂದು ಜನಪ್ರಿಯತೆ ಗಳಿಸಿದ ಕೃತಿ ಕನ್ನಡದಲ್ಲಿ ಇಲ್ಲ ಎಂದೇ ಹೇಳಬಹುದು. ಕೋವಿಡ್ ಸಂದರ್ಭದಲ್ಲಿ ಹಲವು ಮಹಿಳಾ ಸಂಘಗಳು ಈ ಕೃತಿ ವಾಚನವನ್ನು ನಿಯತವಾಗಿ ಮಾಡಿದರು. ಓದಿನ ರೀತಿಯನ್ನು ಮಾರ್ಪಡಿಸಿದ ಹಿರಿಮೆ ಕೂಡ ಈ ಕೃತಿಗೆ ಸಲ್ಲುತ್ತದೆ. 700 ಪುಟಗಳಲ್ಲಿ ಹಬ್ಬಿಕೊಂಡಿರುವ ಗಾಂಧಿ ಕಥನ, ಒಟ್ಟಾರೆ ಅವರ ವ್ಯಕ್ತಿತ್ವವನ್ನು ವಿಸ್ತಾರವಾದ್ಯಂತ ಹಲವು ಚಿಂತಕರು ಕಟ್ಟಿಕೊಟ್ಟ, ವಿಮರ್ಶಿಸಿದ ಪರಿಯ ಕೂಡ ಸಿಗುತ್ತದೆ. ಬಹುಮುಖಿ ನೋಟದಲ್ಲಿ ಗಾಂಧಿ ಬೆಳಗುತ್ತಾರೆ.**

"ಗಾಂಧಿಯಷ್ಟು ವಿಮರ್ಶೆಗೆ ಒಳಗಾದ ಮತ್ತೊಬ್ಬ ಮನುಷ್ಯನಿಲ್ಲ. ನಾವು ಗಾಂಧಿಯನ್ನು ವಿಮರ್ಶೆಗೆ ಒಳಪಡಿಸಿದರೆ ಅವರನ್ನು ಯಾವ ನೆಲೆಯಲ್ಲಿ ವಿಮರ್ಶಿಸಬೇಕು ಎಂಬ ಪ್ರಶ್ನೆ ಇದೆ. ಏಕೆಂದರೆ ಗಾಂಧಿ ಭೂಮಿಯಷ್ಟೇ ಸಮಗ್ರವಾದ ಮನುಷ್ಯ. ಹಾಗಾಗಿ ಇಂದಿನ ಪರಿಸ್ಥಿತಿಯಲ್ಲಿ ಅವರನ್ನು ಅವರಿದ್ದ ಹಾಗೆ ಸಮಗ್ರವಾಗಿ ಜನರ ಮುಂದೆ ಇಟ್ಟು ಜನರೇ ತೀರ್ಮಾನಿಸಲಿ ಎಂದು ಬಯಸಿದ್ದೇನೆ. ನಮ್ಮ ಬಹಳಷ್ಟು ಜನಕ್ಕೆ ಗಾಂಧಿಯ ಶೇ. 10ರಷ್ಟು ಪರಿಚಯವೂ ಇರಲಿಲ್ಲ ಎಂಬುದು ಈ ಕೃತಿಯನ್ನು ಓದಿದ ಜನ ನನಗೆ ಕರೆ ಮಾಡಿ ಹೇಳುತ್ತಿರುವುದರಿಂದ ಗೊತ್ತಾಗುತ್ತಿದೆ. ಗಾಂಧಿಯ ಸತ್ಯ ತಿಳಿಯುವುದೆಂದರೆ ಅವರನ್ನು ಪೂರ್ತಿಯಾಗಿ ಓದಿ ತಿಳಿಯುವುದು," ಎಂದು ಅವರು ತಮ್ಮ ಲೇಖಕನ ಮಾತಿನಲ್ಲಿ ವಿವರಿಸುತ್ತಾರೆ.